ಆ) ಹುಬ್ಬಳ್ಳಿ-ಧಾರವಾಡ ಮಹಾನಗರಸಭೆಯು ಸರ್ಕಾರದಿಂದ ಸಹಾಯಧನವನ್ನು ಪಡೆಯಲು ಯಾವುದೇ ಠರಾವನ್ನು ಪಾಸು ಮಾಡಿಲ್ಲ.

ಇ) ಸರ್ಕಾರಕ್ಕೆ ಪ್ರಸ್ತಾವನೆ ಬಂದಾಗ ಅವುಗಳ ಅರ್ಹತೆಯ ಮೇರೆಗೆ ಪರಿಶೀಲಿಸಲಾಗುವುದು.

ಈ) ಮೇಲೆ (ಇ)ಗೆ ಕೊಟ್ಟಿರುವ ಉತ್ತರದಿಂದಾಗಿ ಇದು ಉದ್ಭವಿಸುವುದಿಲ್ಲ.

ಅನೇಕಲ್ ಕ್ಷೇತ್ರದಲ್ಲಿ ಬೃಹತ್ ಕೈಗಾರಿಕೆಗಳು

433 - ಶ್ರೀ ವೈ. ರಾಮಕೃಷ್ಣ (ಆನೇಕಲ್) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೃಹತ್, ಮಧ್ಯಮ ಹಾಗೂ ಸಣ್ಣ ಪ್ರಮಾಣದ ಮತ್ತು ಜವಳ ಕೈಗಾರಿಕೆಗಳು ಆನೇಕಲ್ ವಿಧಾನ ಸಭಾ ಕ್ಷೇತ್ರದಲ್ಲಿ ಎಷ್ಟಿದೆ? (ವರ್ಗವಾರು ಮಾಹಿತಿ ನೀಡುವುದು)

ಆ) ಪ್ರತಿ ಕೈಗಾರಿಕೆಯಲ್ಲಿ ಎಷ್ಟು ನೌಕರರನ್ನು ನೇಮಕಾತಿ ಮಾಡಲಾಗಿದೆ ಅದರಲ್ಲಿ ಎಷ್ಟು ಜನ ಸ್ಥಳೀಯರಿದ್ದಾರೆ?

ಇ) ಸ್ಥಳೀಯ ಅರ್ಹ ಅಭ್ಯರ್ಥಿಗಳಿಗೆ ನೇಮಕಾತಿ ಮಾಡುವ ಬಗ್ಗೆ ಆದ್ಯತೆ ನೀಡುವ ಉದ್ದಿಮೆದಾರರಿಗೆ ಸರ್ಕಾರವು ಒತ್ತಾಯಿಸಿದೆಯೆ?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):

ಅ) ಆನೇಕಲ್ ವಿಧಾನ ಸಭಾ ಕ್ಷೇತ್ರದಲ್ಲಿ ಒಟ್ಟು 42 ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ 807 ಸಣ್ಣ ಪ್ರಮಾಣದ ಕೈಗಾರಿಕೆಗಳು ಇರುತ್ತವೆ. ಮಧ್ಯಮ ಕೈಗಾರಿಕೆಗಳು ಇರುತ್ತವೆ. ಮಧ್ಯಮ ಮತ್ತು ಬೃಹತ್ ವಲಯದಲ್ಲಿ ಯಾವುದೇ ಜವಳಿ ಉದ್ಯಮಗಳಿರುವುದಿಲ್ಲ. ಸಣ್ಣ ಪ್ರಮಾಣದ ಕೈಗಾರಿಕಾ ವಲಯದಲ್ಲಿ 447 ಜವಳಿ ಕೈಗಾರಿಕೆಗಳು ಇರುತ್ತವೆ.

ಆ)

ಪ್ರವರ್ಗ	ಮೊತ್ತ	ಸ್ಥಳೀಯ	ಶೇಕಡ
ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು	4062	3200	79
ಸಣ್ಣ ಪ್ರಮಾಣದ ಕೈಗಾರಿಕೆಗಳು	6652	6652	100

(ಪ್ರೋತ್ಸಾಹ ಧನ ಮತ್ತು ರಿಯಾಯಿತಿಗಳನ್ನು ಮಂಜೂರು ಮಾಡುವಾಗ ಕೈಗಾರಿಕೆಗಳು ನೀಡಿದ ಘೋಷಣೆಯನ್ನಾಧರಿಸಿ ಈ ಮಾಹಿತಿಯನ್ನು ನೀಡಲಾಗಿದೆ.)

ಇ) ಹೌದು. ಸ್ಥಳೀಯ ಪ್ರದೇಶಗಳಲ್ಲಿ ಸ್ಥಾಪಿಸಲ್ಪಡುವ ಹೊಸ ಕೈಗಾರಿಕೆಗಳಲ್ಲಿ ಸಿ ಮತ್ತು ಡಿ ವರ್ಗಗಳಲ್ಲಿನ ಶೇಕಡ 100ರಷ್ಟು ಹುದ್ದೆಗಳನ್ನು ಹಾಗೂ ಇತರ ವರ್ಗಗಳಲ್ಲಿ ಶೇಕಡ 80 ರಷ್ಟು ಹುದ್ದೆಗಳನ್ನು ಸ್ಥಳೀಯರಿಗೆ ನೀಡಬೇಕೆಂಬ ಷರತ್ತನ್ನು ಹಾಕಲಾಗಿದೆ. ಈ ಬಗ್ಗೆ ಉದ್ಯಮಿಗಳಿಂದ ಘೋಷಣಾ ಪತ್ರವನ್ನೂ ಸಹ ಪಡೆಯಲಾಗುತ್ತಿದೆ.

ಕೊಳಚೆ ಪ್ರದೇಶಗಳ ಸ್ವಚ್ಛತೆ ಬಗ್ಗೆ

464 - ಶ್ರೀ ವೈ. ರಾಮಕೃಷ್ಣ (ಆನೇಕಲ್ ಕ್ಷೇತ್ರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಕೊಳಚೆ ಪ್ರದೇಶಗಳ ಸಂಖ್ಯೆ ಎಷ್ಟು ಹಾಗೂ ಅವುಗಳ ಹೆಸರೇನು?

ಆ) ಆ ಪೈಕಿ ಬೆಂಗಳೂರು ನಗರ ಜಿಲ್ಲೆಯಲ್ಲಿರುವ ಕೊಳಚೆ ಪ್ರದೇಶಗಳೆಷ್ಟು?

ಇ) ಈ ಜನರ ಹಾಗೂ ಆ ಪ್ರದೇಶಗಳ ಅಭಿವೃದ್ಧಿಗಾಗಿ ಕಳೆದ 5 ವರ್ಷಗಳಿಂದ ಕೇಂದ್ರ ಸರ್ಕಾರದಿಂದ ಬಂದ ಹಣವೆಷ್ಟು?

ಈ) ಈ ಹಣದಿಂದ ಎಷ್ಟು ಕೊಳಚೆ ಪ್ರದೇಶಗಳನ್ನು ಸ್ವಚ್ಛಗೊಳಿಸಲಾಗಿದೆ ಹಾಗೂ ಎಷ್ಟು ಕೊಳಚೆ ಪ್ರದೇಶಗಳನ್ನು ಸ್ಥಳಾಂತರಿಸಲಾಗಿದೆ?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ರಾಜ್ಯದಲ್ಲಿ 1532ಕೊಳಚೆ ಪ್ರದೇಶಗಳು ಇರುತ್ತವೆ. ವಿವರಗಳನ್ನು ಅನುಬಂಧ-ಅ ನಲ್ಲಿ ಕೊಡಲಾಗಿದೆ.

ಆ) ಬೆಂಗಳೂರು ನಗರ ಜಿಲ್ಲೆಯಲ್ಲಿ 338 ಕೊಳಚೆ ಪ್ರದೇಶಗಳಿರುತ್ತದೆ.

ಇ) ಕಳೆದ 5ವರ್ಷಗಳಲ್ಲಿ ಈ ಪ್ರದೇಶಗಳ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದಿಂದ ಯಾವ ಹಣವು ಬಂದಿರುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಬಿಜಾಪುರ ಪಟ್ಟಣಕ್ಕೆ ಕುಡಿಯುವ ನೀರಿನ ವ್ಯವಸ್ಥೆ

157 - ಶ್ರೀ ಶಿವಾನಂದ ಎಸ್. ಪಾಟೀಲ್ (ತಿಕೋಟ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಪಟ್ಟಣದ ಕುಡಿಯುವ ನೀರಿನ ಯೋಜನೆಯನ್ನು 1991ರಲ್ಲಿ ಪ್ರಾರಂಭಿಸಿ 1996ರ ಇಸವಿಯ ಒಳಗಾಗಿ ಮುಗಿಸುವ ಉದ್ದೇಶವಿದ್ದು ಹಾಗೂ ಈಗಾಗಲೇ 1/4 ಭಾಗ ಕೆಲಸ ಆಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಆಲಮಟ್ಟಿ ಬ್ಯಾಕ್‌ವಾಟರ್ ಬಿಜಾಪುರ ಜಿಲ್ಲೆಯ ಕೋಲಾರದವರೆಗೆ ಬರುವುದರಿಂದ ಸದರಿ ಯೋಜನೆಯ ಇನ್‌ಟೇಕ್‌ವೆಲ್ ಮತ್ತು ಜಾಕ್‌ವೆಲ್‌ಗಳ ಕೆಲಸ 1995ರಲ್ಲಿ ಮುಗಿಸದಿದ್ದರ, ಈ ಯೋಜನೆ ಕೆಲಸ ಮುಗಿಸಲು ವಿಳಂಬವಾಗುವುದೆಂಬುದರ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಯೋಜನೆಯನ್ನು 1995 ರಲ್ಲಿ ಮುಗಿಸಲು ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು? ಹಾಗೂ ಈ ಯೋಜನೆಗಾಗಿ ಈವರೆಗೆ ಖರ್ಚು ಮಾಡಿದ ಹಣ ಎಷ್ಟು? ಹಾಗೂ ಈ ಯೋಜನೆಯನ್ನು ಪೂರ್ತಿಗೊಳಿಸಲು ಬೇಕಾಗುವ ಹಣ ಎಷ್ಟು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಶೇಕಡ 50 ಭಾಗದಷ್ಟು ಕೆಲಸಗಳು ಈಗಾಗಲೇ ಮುಗಿದಿದೆ.

ಆ) ಈ ಕೆಲಸದ ಗುತ್ತಿಗೆಯನ್ನು ಹಿಡಿದ ಗುತ್ತಿಗೆದಾರರು ಕೆಲಸವನ್ನು ನಿಧಾನ ಮಾಡಿದುದರಿಂದ ಸಂಪರ್ಕ ಪೈಪು ಉಳಿದ ಕೆಲಸವನ್ನು ಮಾಡಲು ಹೊಸ ಗುತ್ತಿಗೆದಾರರನ್ನು ನೇಮಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಇ) ಯೋಜನೆಯ ವಿವಿಧ ಕಾಮಗಾರಿಗಳ ಕೆಲಸಗಳು ಒಳ್ಳೆಯ ಪ್ರಗತಿಯಲ್ಲಿವೆ. ಹಾಗೂ ಮೂಲಸ್ಥಾವರದ ಕೆಲಸಗಳನ್ನು ಈ ವರ್ಷದಲ್ಲಿ ಪೂರ್ತಿ ಮಾಡಲು ಎಲ್ಲಾ ಪ್ರಯತ್ನಗಳನ್ನು ಕೈಗೊಳ್ಳಲಾಗಿದೆ.